**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ25-07-2022**

**ಪಾಟೀ ಸವಾಲುಃ ಶ್ರೀ ಎಸ್ ಜಿ ವಕೀಲರಿಂದ**

ನಾನು ದಾವಾವನ್ನು ಸ ನಂ **3/2** ರ **01** ಎಕರೆ **05** ಗುಂಟೆಗೆ ಸಂಬಂಧಿಸಿದಂತೆ ದಾಖಲು ಮಾಡಿರುತ್ತೇನೆ. ದಾವಾ ಜಮೀನಿನ ಚಕ್ಕು ಬಂದಿ ಪೂಃ ದಿನೇಶ್ ರವರ ಜಮೀನು, ಪಃ ನಿರ್ವಾಣೇಗೌಡರ ಜಮೀನು ಉಃ ನಿರ್ವಾಣೇಗೌಡರ ಜಮೀನು, ದಃ ಮಲ್ಲೇಶಪ್ಪ ಮತ್ತು ಚಂದ್ರಶೇಖರ್ ರವರ ಜಮೀನು. ದಾವಾ ಆಸ್ತಿಯ ಪೂರ್ವಕ್ಕೆ ಪ್ರತಿವಾದಿಯವರ ರೊಬೋಸ್ಟಾ ಕಾಫಿ ತೋಟ ಇದೆ. ಪ್ರತಿವಾದಿಗೆ ಯಾವ ರೀತಿ ಜಮೀನು ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಕ್ರಯಪತ್ರದಲ್ಲಿ ಕ್ರಯಪತ್ರದ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಪ್ರತಿವಾದಿ ದಿನೇಶ್ ರವರ ಜಮೀನು ಎಂದೇ ಇದೆ. ಪ್ರತಿವಾದಿಯ ಜಮೀನಿನಲ್ಲಿ **100** ವರ್ಷದ ಕಾಫಿ ಗಿಡಗಳು ಇವೆ. ನನ್ನ ಜಮೀನಿನಲ್ಲಿ **20** ರಿಂದ **22** ವಯಸ್ಸಿನ ಕಾಫಿ ಗಿಡಗಳು ಇವೆ. ನಾನು ಖರೀದಿ ಮಾಡುವ ಪೂರವದಲ್ಲಿ ಸ್ವಲ್ಪ ಕಾಫಿ ಗಿಡಗಳು ಇದ್ದವು ನಾನು ಖರೀದಿ ಮಾಡಿದ ನಂತರ ಸ್ವಲ್ಪ ಗಿಡಗಳನ್ನು ನೆಟ್ಟಿರುತ್ತೇನೆ. ನಾನು ಜಮೀನು ಖರೀದಿ ಮಾಡುವ ಕಾಲಕ್ಕೆ ಸರ್ವೆ ಮಾಡಿಸಿರುತ್ತೇನೆ ನಂತರ ಮಾಡಿಸಿರುವುದಿಲ್ಲ. ಸ ನಂ **3/2** ಮತ್ತು **1/5** ಕ್ಕೆ ಸಂಬಂಧಿಸಿದಂತೆ **2019** ರ ಜನವರಿಯಲ್ಲಿ ಸರ್ವೆ ಇಲಾಖೆಯವರು ನನಗೆ ಮತ್ತು ಪ್ರತಿವಾದಿಯವರಿಗೆ ನೋಟೀಸ್ ನೀಡಿ ಸರ್ವೆ ಕಾರ್ಯ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯರ ಜಮೀನಿನ ನಡುವೆ ನಾನು ಖರೀದಿ ಮಾಡುವ ಪೂರ್ವದಿಂದಲೇ ಒಂದು ಕಾಲು ದಾರಿ ಇದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ **2019** ರಲ್ಲಿ ನನ್ನ ಜಮೀನಿನ ಸುತ್ತ ಚಿಕ್ಕ ಬೇಲಿ ಇತ್ತು ಆಗ ಆನೆಗಳು ನುಗ್ಗಿ ನಾಶಪಡಿಸಿರುತ್ತವೆ. ಪ್ರತಿವಾದಿಯರು ನನ್ನ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಗಲಾಟೆ ಮಾಡಿದ ದಿನ ಮತ್ತು ಸಮಯ ನನಗೆ ನೆನಪಿಲ್ಲ. ಪ್ರತಿವಾದಿ ಮತ್ತು ಆತನ ಹೆಂಡತಿ ನನಗೆ ಕೆಲಸ ಮಾಡಬೇಡ ಅದು ನಮಗೆ ಸೇರಿದ ಜಮೀನು ಎಂದು ಗಲಾಟೆ ಮಾಡಿರುತ್ತಾರೆ. ಪ್ರತಿವಾದಿಯು ನಮ್ಮ ತೋಟದ ಸ್ವಲ್ಪ ಗಿಡಗಳನ್ನು ಕಡಿದು ನಾಶ ಮಾಡಿರುತ್ತಾರೆ. ಪ್ರತಿವಾದಿಯು **50** ಕಾಫಿ ಗಿಡಗಳನ್ನು ಕಡಿದಿರುತ್ತಾರೆ. ನನ್ನ ವಾದಪತ್ರದಲ್ಲಿ ಪ್ರತಿವಾದಿಯು **50** ಗಿಡಗಳನ್ನು ಕಡಿದ ಬಗ್ಗೆ ಬರೆಸಿರುವುದಿಲ್ಲ ಎಂದರೆ ಸರಿ. ನನಗೆ ನ್ಯಾಯಾಲಯದ ಪ್ರಕರಣ ನಡೆಸಿ

ಅನುಭವ ಇದೆ ಎಂದರೆ ಸರಿ. **50** ಕಾಫಿ ಗಿಡ ಕಡಿದಿದ್ದರಿಂದ ನನಗೆ ಎಷ್ಟು ನಷ್ಟವಾಗಿದೆ ಎಂದು ಹೇಳಲು ಆಗುವುದಿಲ್ಲ. ಪ್ರತಿವಾದಿಗೆ ಸೇರಿದ ಸ ನಂ **1/5** ರ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನಾನುಭವ ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿಯು ಸ ನಂ **1/5** ಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಶಾಶ್ವತ ನಿರೋದಾಜ್ಞೆ ಕೋರಿ ದಾವಾ ದಾಖಲು ಮಾಡಿದ್ದರು ಎಂದರೆ ಸಾಕ್ಷಿ ಸುಳ್ಳು ದಾವಾ ದಾಖಲು ಮಾಡಿದ್ದರು ಎನ್ನುತ್ತಾರೆ. ಪ್ರತಿವಾದಿಯು ದಾಖಲು ಮಾಡಿದ ದಾವಾದಲ್ಲಿ ಸ ನಂ **3/2** ರಲ್ಲಿ ಅವರಿಗೆ **5** ಗುಂಟೆ ಜಾಗ ಇದೆ ಎಂದು ಹೇಳಿ ದಾವಾ ದಾಖಲು ಮಾಡಿರುತ್ತಾರೆ. ಪ್ರತಿವಾದಿಯು ತಕರಾರಿನಲ್ಲಿ ಅವರಿಗೆ **3/2** ರಲ್ಲಿ **05** ಗುಂಟೆ ಜಮೀನು ಇದೆ ಎಂದು ಹೇಳಿ ಬರೆಸಿರುತ್ತಾರೆ. ಪ್ರತಿವಾದಿಯರ ಜಮೀನಿನ ಪಶ್ಚಿಮ ಭಾಗದಲ್ಲಿ ನನ್ನ ಜಮೀನಿನ ಪೂರ್ವಕ್ಕೆ ಸ ನಂ **1/5** ರಲ್ಲಿ **05** ಗುಂಟೆ ಪ್ರದೇಶ ನನಗೆ ಸೇರಬೇಕೆಂದು ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆಗ ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದು ಅವರು ನನ್ನನ್ನು ಮತ್ತು ಪ್ರತಿವಾದಿಯನ್ನು ಕರೆಸಿ ಸರ್ವೆ ಮಾಡಿಸಿಕೊಳ್ಳುವಂತೆ ಹೇಳಿ ಅವರು ತಹಸೀಲ್ದಾರ್ ರವರಿಗೆ ಪತ್ರ ನೀಡಿ ಸರ್ವೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ **26-01-2019** ರಂದು ಸರ್ವೆ ಇಲಾಖೆಯವರು ನಮಗೆ ನೋಟೀಸ್ ನೀಡಿ ನಮ್ಮ ಜಮೀನುಗಳನ್ನು ಸರ್ವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ **26-01-2019** ರಲ್ಲಿ ಮಾಡಿದ ಸರ್ವೆ ವರದಿಯಲ್ಲಿ ನಾನೇ ಪ್ರತಿವಾದಿಗೆ ಸೇರಿದ ಜಮೀನಿನಲ್ಲಿ **05** ಗುಂಟೆ ಜಾಗ ಇದೆ ಎಂದು ತಕರಾರು ಮಾಡಿರುತ್ತೇನೆ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸೇರಿದ ಜಾಗವನ್ನು ಹೇಗಾದರೂ ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವಾ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ **111** ದಂ ಪ್ರ ಸಂ ಕಲಂ ಅಡಿಯಲ್ಲಿ ಪ್ರಕರಣ ದಾಖಲು ಮಾಡಿದ್ದು ಅದರ ಆದೇಶದ ಪ್ರತಿ ತೋರಿಸಿದ್ದು ಅವರು ಅದನ್ನು ಗುರುತಿಸಿದ ಮೇರೆಗೆ ಅದನ್ನು ನಿಡಿ-**1** ಎಂದು ಗುರುತಿಸಲಾಯಿತು. ಮಾನ್ಯ ತಹಸೀಲ್ದಾರ್ ರವರ ನ್ಯಾಯಾಲಯದಲ್ಲಿ ಹಾಜರಾಗಿ ನಾನು ಸ್ಥಳದಲ್ಲಿ ಯಾವುದೇ ಗಲಾಟೆ ಮಾಡುವುದಿಲ್ಲ ಎಂದು ಮುಚ್ಚಳಿಕೆ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಿಃ **11-10-2021** ರಲ್ಲಿ ಪ್ರತಿವಾದಿಯು ನನ್ನ ವಿರುದ್ಧ ಪೋಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಸುಳ್ಳು ದೂರು ದಾಖಲು ಮಾಡಿರುತ್ತಾರೆ ಎಂದು ಹೇಳುತ್ತಾರೆ.

ನಾನು ಸ ನಂ **3/2** ಮತ್ತು **1/5** ರ ನಡುವೆ ಇರುವ ಬಾನ್ ಕಲ್ಲನ್ನು ನಾಶ ಮಾಡಿದ ಬಗ್ಗೆ ದೂರು ದಾಖಲು ಮಾಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ದೂರು ದಾಖಲು ಮಾಡಿರುತ್ತಾರೆ ಎನ್ನುತ್ತಾರೆ. ಪೋಲೀಸ್ ಇಲಾಖೆಯಿಂದ ತಹಸೀಲ್ದಾರ್ ಕಛೇರಿಗೆ ಬಾನ್ ಕಲ್ ನಾಶಪಡಿಸಿದ ಬಗ್ಗೆ ವರದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ತಹಸೀಲ್ದಾರ್ ರವರು ಸ್ಥಳಕ್ಕೆ ಬಂದಾಗ ದಾವಾ ಚಾಲ್ತಿಯಲ್ಲಿದೆ ಎಂದು ಅವರನ್ನು ವಾಪಸ್ಸು ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಬಲಾಢ್ಯನಾಗಿದ್ದು ಪ್ರತಿವಾದಿಯು ಹೊಂದಿರುವ ಸ್ವಲ್ಪ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು)

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು